ಸೇರಿಕೊಳ್ಳುವುವು. ಸಂಗೀತಗಂಧವನ್ನೂ ಅರಿಯದ ಸಾಹಿತ್ಯಪಂಡಿತರೆಲ್ಲಾ ಸಂಗೀತವಿಮರ್ಶಕರಾಗುತ್ತಾರೆ. ತ್ಯಾಗರಾಜರ 'ದಾಶರಥೇ ದಯಾಶರಧೇ' ಎಂಬ ಕೀರ್ತನೆಯನ್ನು ಕೇಳಿ ಒಬ್ಬ ದೊಡ್ಡ ಸಂಸ್ಕೃತಪಂಡಿತರು 'ಇದೇನಯ್ಯಾ! ತ್ಯಾಗಯ್ಯನಿಗೆ ಪದಗಳ ಭೇದವೇ ತಿಳಿದ ಹಾಗಿಲ್ಲವಲ್ಲಾ!' ಎಂದು ಆಕ್ಷೇಪಿಸಿದರು. ತೆಲುಗು ವ್ಯಾಕರಣವನ್ನು ಕಂಠಪಾಠ ಮಾಡಿದ ತಮಿಳು ಸಂಗೀತವಿದ್ವಾಂಸರೊಬ್ಬರು ತ್ಯಾಗಯ್ಯನವರ ಕೃತಿಗಳಲ್ಲಿ, ಸಾಧ್ಯವಾದ ಕಡೆಯೆಲ್ಲಾ, ವ್ಯಾವಹಾರಿಕ ಪದ ವಾಕ್ಯಗಳ ಸ್ವರೂಪವನ್ನು ತಿದ್ದಿಬಿಟ್ಟಿದ್ದಾರೆ. ಇನ್ನು ಭಾಷೆಯನ್ನು ಸರಿಯಾಗಿ ಕಲಿಯದ ಕೀರ್ತನಕರ್ತರು ಈ ಸಾಹಿತ್ಯ ಲಾಕ್ಷಣಿಕರ ತೃಪ್ತಿಗಾಗಿ ಪಡುವ ಕಷ್ಟವನ್ನು ಕಂಡರೆ ಮರುಕವಾಗುವುದು! ಆನಂದ ಭೈರವಿ ರಾಗದಲ್ಲಿ ಮುದ್ದಾದ ವರ್ಣಮಟ್ಟಿನಲ್ಲಿ 'ಸದ್ಭಕ್ತಿನಿ ಗಲ್ಗ ಜೇಸಿ' ಎಂಬ ಕೃತಿಪಲ್ಲವಿಯನ್ನು ಎತ್ತಿದ್ದಾರೆ ಪೂಚಿ ಶ್ರೀನಿವಾಸಯ್ಯಂಗಾರರು. ಆದರೆ ಅನುಪಲ್ಲವಿಯಲ್ಲಿ ಪ್ರಾಸಕ್ಕಾಗಿ ಇನ್ನೊಂದು 'ದ್ಭ'ಕಾರವನ್ನು ಆತನಿಗೆ ಸಂಪಾದಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಪ್ರಾಸವನ್ನು ಬಿಟ್ಟುಬಿಡುವ ಧೈರ್ಯವೂ ಇಲ್ಲ. ಹೀಗಾಗಿ ತಮಿಳುಭಾಷೆಯ ಬರವಣಿಗೆಯಲ್ಲಿ ದ್ಭ-ತ್ವ ಎರಡೂ ಒಂದೇ ಆದ್ದರಿಂದ 'ತತ್ಪೂರ್ವಮು ದೈತ್ಯೇಶುನಿ' ಎಂದು ಹೊಸೆದು ಆತನು ಕೃತಾರ್ಥನಾಗಿದ್ದಾನೆ! ತ್ಯಾಗಯ್ಯ, ದೀಕ್ಷಿತರು ಮುಂತಾದ ಮಹಾಮಹರು ಕೂಡಾ ಈ ಕಷ್ಟಕ್ಕೆ ಸಿಕ್ಕಿ ತಮ್ಮ ಸಂಗೀತ ರಚನೆಗಳನ್ನು ಸ್ವಲ್ಪ ನುಲಿದಿದ್ದಾರೆಂದೇ ಹೇಳಬೇಕಾಗಿದೆ. ಅವರು ಎಷ್ಟು ಸಮರ್ಥರಾಗಿದ್ದರೂ ಅವರ ಸಂಗೀತಕ್ಕಿರುವಷ್ಟು ವರ್ಚಸ್ಸು, ಪ್ರತಿಭೆ, ಸಾಹಿತ್ಯಕ್ಕೆ ಇಲ್ಲ. ಆದರೆ ಸಾಹಿತ್ಯದ ನಿಯಮಗಳೂ ಸಂಕೇತಗಳೂ ಅವರನ್ನು ಸ್ವಲ್ಪಮಟ್ಟಿಗಾದರೂ ಕಷ್ಟಕ್ಕೀಡಾಗಿಸದೆ ಬಿಡಲಿಲ್ಲ. ಆದ್ದರಿಂದ ನಾದಾಭಿಮಾನಿಗಳಾದ ನಿರ್ಮಾತರು ಭಾಷಾಭಿಮಾನವನ್ನು ಬಹಳ ಮಟ್ಟಿಗೆ ಹದ್ದಿನಲ್ಲಿಟ್ಟುಕೊಳ್ಳದಿದ್ದರೆ, ಮೂಲದ್ರವ್ಯಕ್ಕೇ ಲೋಪ ಬರುವ ಸಂಭವವುಂಟು. ಹಾಗೆ ಹದ್ದಿನಲ್ಲಿಡಲಾದ ಭಾಷೆ, ಸಾಹಿತ್ಯಕ್ಕೆ-ಸಂಗೀತಕ್ಕೆ ಎಷ್ಟೋ ವಿಧಗಳಲ್ಲಿ ಸಹಾಯ ಮಾಡಬಲ್ಲದು. ಅವುಗಳಲ್ಲಿ ಮುಖ್ಯವಾದ ಒಂದು ವಿಷಯವನ್ನು ಈಗ ಸ್ವಲ್ಪ ಅರಿಕೆ ಮಾಡುತ್ತೇನೆ.

ಅದು ನನ್ನಯ್ಯನವರು (ತೆಲುಗು ಸಾಹಿತ್ಯದ ಕವಿತ್ರಯದಲ್ಲಿ ನನ್ನಯ್ಯ ಮೊದಲನೆಯವನು; ಮಹಾಭಾರತದ ಪೂರ್ವಭಾಗವನ್ನು ರಚಿಸಿದ ಮಹಾಕವಿ. ಈತನೇ ಆದಿಕವಿಯೆಂತಲೂ ಹೇಳುತ್ತಾರೆ.) ಸಾಹಿತ್ಯಕ್ಕಾಗಿ ನಮಗುಪದೇಶ ಮಾಡಿದ 'ಅಕ್ಷರ ರಮ್ಯತೆ'. ಸಂಗೀತ ಅಆಇಈ ಮೊದಲಾದ 'ಸ್ವರ'ಗಳ ಮೂಲಕ ಬಾಳುವ ಕಲೆ. ವ್ಯಂಜನಗಳಿಗೆ ಸ್ವತಂತ್ರವಾಗಿ ಶಬ್ದವನ್ನೇ ಹೊರಡಿಸುವ ಸಾಮರ್ಥ್ಯವಿಲ್ಲ. ಇನ್ನು ನಾದದ ಮಾತೇನು! ಮತ್ತು ವ್ಯಂಜನಗಳ ಶಬ್ದ ಖಂಡ ಖಂಡವಾಗಿರುತ್ತದೆ. ಅಖಂಡವಾದ, ದೀರ್ಘವಾದ ನಾದವನ್ನು ಕೊಡುವ ಶಕ್ತಿ ಸ್ವರಗಳಿಗೇ ಉಂಟು. ಆದ್ದರಿಂದ ನಾದಸೃಷ್ಟಿಗೆ ವ್ಯಂಜನಗಳು ಪ್ರತಿಬಂಧಕಸಾಮಗ್ರಿ. ಅವು ಸ್ವರಗಳನ್ನಾಶ್ರಯಿಸಿ ಬದುಕಬೇಕಾದವು. ಹಾಗೆಯೇ ಅಕಾರಾದಿ ಸ್ವರಗಳಿಗೂ ಸ್ವತಂತ್ರವಾಗಿ, ಪದಗಳಾಗಿ, ವಾಕ್ಯಗಳಾಗಿ ಕೂಡಿಕೊಂಡು ಅರ್ಥವನ್ನೂ ಭಾವವನ್ನೂ ವ್ಯಕ್ತಮಾಡುವ ಶಕ್ತಿಯಿಲ್ಲ. ಒಂದು ಸ್ವರದಿಂದ ಮತ್ತೊಂದು ಸ್ವರವನ್ನು ಹಾರಿ ಹಿಡಿಯಬೇಕಾದರೆ ನಡುವೆ ವ್ಯಂಜನವನ್ನು ಊರಿಕೊಳ್ಳದಿದ್ದರೆ ಆಗುವುದಿಲ್ಲ. ಹೀಗೆ ಸ್ವರವ್ಯಂಜನಗಳೆರಡೂ ಅನ್ಯೋನ್ಯಾಶ್ರಯವಾದರೂ, ನಾದರಚನೆಗೆ- ಎಂದರೆ ಸಂಗೀತಕ್ಕೆ- ಸ್ವರಗಳೂ, ಶಬ್ದ ರಚನೆಗೆ- ಎಂದರೆ ಭಾಷೆಗೆ- ವ್ಯಂಜನಗಳೂ ಜೀವದಂಥವೆಂದು ಹೇಳಬೇಕಾಗಿದೆ. ಆದ್ದರಿಂದಲೇ ಭಾಷೆಯಲ್ಲಿ ಸ್ವರಗಳಿಗಿಂತ ವ್ಯಂಜನಗಳ ಮೇಲೆ ಹೆಚ್ಚು ಗಮನವನ್ನು ನಾವು ನಿಲ್ಲಿಸುತ್ತೇವೆ. ಸಾಧ್ಯವಾದ ಹಾಗೆಲ್ಲಾ ಸ್ವರಗಳನ್ನು ಅಗಿದು ನುಂಗಿಬಿಡುತ್ತಿರುತ್ತೇವೆ. ಸಂಗೀತದ ವ್ಯವಹಾರ ಇದಕ್ಕೆ ನೇರವಾದ ಎದುರುನಡೆ. ಸ್ವರಗಳನ್ನು ನೀಡಿಸಿಕೊಳ್ಳುತ್ತ ವ್ಯಂಜನಗಳನ್ನು ಯಥಾವಕಾಶವಾಗಿ ಅಗಿಯಬೇಕಾಗಿರುತ್ತೆ. ಆದ್ದರಿಂದ ಸಂಗೀತದಲ್ಲಿ 'ಅಕ್ಷರರಮ್ಯತೆ' ಎಂದರೆ 'ವ್ಯಂಜನಗಳ ಪ್ರಜಾಪತ್ಯ ಕಡಿಮೆಯಾಗಿರುವ ಸ್ವರಗಳ ಸಾಮ್ರಾಜ್ಯ' ಎಂದರ್ಥ. ಮತ್ತು ಋ ಒ ಎಂಬ ಕೃತ್ರಿಮ ಸ್ವರಗಳನ್ನು ಹಾಗಿರಿಸಿ, ಮಿಕ್ಕವುಗಳನ್ನು ಗಮನಿಸಿದರೆ, ಸ್ವರಗಳೆಲ್ಲ 'ಸ್ವತೋರಮ್ಯ'ವಾಗಿ ಕಾಣಬರುತ್ತವೆ. ನಾದವನ್ನು ಆ ಈ ಊ ಎಂದು ಯಾವ ಸ್ವರದ ಮೂಲಕ ವ್ಯಕ್ತಮಾಡಿದರೂ, ಅದರ ಬಣ್ಣದಲ್ಲಿ ಭೇದವಿರಬಹುದಲ್ಲದೆ ರಮ್ಯತೆಯಲ್ಲಿ ಭೇದವಿರುವುದಿಲ್ಲ. ವ್ಯಂಜನಗಳು ಹಾಗಲ್ಲ; ಸರಳಗಳು; ಪರುಷಗಳು, ಮಹಾಪ್ರಾಣಗಳು, ಒತ್ತಕ್ಷರಗಳು, ಅದರಲ್ಲೂ ಕ್ವ-ಕ್ಮ ಮುಂತಾದ ವಿಜಾತೀಯ ಸಂಯೋಗಗಳು, - ಒಂದಕ್ಕಿಂತ ಮತ್ತೊಂದು ಕಟುವಾಗಿ ನಮ್ಮ ಕಿವಿಗೆ ತೋರುವುವು. ಆದ್ದರಿಂದ ನಾದವ್ಯಕ್ತಿಗೆ ಸಹಾಯವಾಗಿ ಬರುವ ಭಾಷೆ ಅಸಂಯುಕ್ತವಾಗಿ ಪರುಷ ಸರಳಮಯವಾಗಿ ಇದ್ದರೆ ಗಾನಕಲೆ ತಲೆಯೆತ್ತಿಕೊಂಡು ಮೆರೆಯುವುದು; ಇಲ್ಲದಿದ್ದರೆ ಹಿಂಜರಿದು ಕುಂಟುವುದು. ಮೇಲ್ಕಂಡ ಕಟುವರ್ಣಗಳನ್ನು ಪೂರ್ತಿಯಾಗಿ ಬಿಟ್ಟು ಹಾಡುಗಳನ್ನು ಬರೆಯುವುದು ಯಾವ ಭಾಷೆಯಲ್ಲೂ ಸಾಧ್ಯವಲ್ಲ,